# ಆ ತೆರೆಯಿಂದ ಈ ತೆರೆಗೆ ಸಪ್ತಮಿ ಸವಾರಿ

■ ಪದ್ಮನಾಭ ಭಟ್



ಈಜುಗಾರ್ತಿಯಾಗಿದ್ದ ಸಪ್ತಮಿ ಗೌಡ ‘ಪಾಪ್‌ಕಾರ್ನ್ ಮಂಕಿ ಟೈಗರ್’ ಸಿನಿಮಾದಿಂದ ನಟನೆಗೆ ಇಳಿದಿದ್ದಾರೆ. ಈಗ ಅವರು ರಿಷಭ್ ನಿರ್ದೇಶಿಸಿ, ನಟಿಸುತ್ತಿರುವ ‘ಕಾಂತಾರ’ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ನೀರ ತೆರೆಯಿಂದ ಬೆಳ್ಳಿ ತೆರೆಗೆ ಜಿಗಿದಿರುವ ಇವರು ಬಣ್ಣದ ಲೋಕದಲ್ಲಿ ಈಜುವ ಉಮೇದಿನಲ್ಲಿದ್ದಾರೆ.

ಬಾಲ್ಯದಿಂದಲೇ ನೀರೆಂದರೆ ಮೈಮರೆಯುತ್ತಿದ್ದ ಹುಡುಗಿ ಸಪ್ತಮಿ. ನೀರಲ್ಲಿ ಮೀನಾಗಿ ಈಜುತ್ತ ಮತ್ತೊಂದು ತುದಿ ಮುಟ್ಟುವ ಸಂಭ್ರಮವನ್ನು ಬಿಟ್ಟರೆ ಅವರನ್ನು ಹೆಚ್ಚು ಗಮನಸೆಳೆಯುತ್ತಿದ್ದದ್ದು ವೇದಿಕೆ. ಶಾಲೆಗಳಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಉತ್ಸವಗಳಲ್ಲಿ ಮ್ಯಾಡ್‌ಆ್ಯಡ್‌ಗಳನ್ನು ಮಾಡುತ್ತಿದ್ದ ಹುಡುಗಿಗೆ ರಜನೀಕಾಂತ್ ಅಂದರೆ ಹುಚ್ಚು.

ನೀರತೆರೆಗಳ ಮೇಲೆ ಬಳುಕುತ್ತಲೇ ಹಿರಿತೆರೆಯ ಕಡೆಗೂ ಅಭಿಮಾನದ ಕಣ್ಣೊಂದನ್ನು ಇಟ್ಟುಕೊಂಡಿದ್ದ ಅವರಿಗೆ ತಾನೇ ನಟನೆಯ ಗಂಧ ಮೈತುಂಬಿಕೊಳ್ಳಲು ಶುರುವಾಗಿದ್ದು ಇಂಜಿನಿಯರಿಂಗ್ ಮಾಡುತ್ತಿದ್ದಾಗ. ಆಗ ಸಪ್ತಮಿಯನ್ನು ನೋಡಿದ ಹಲವರು ಸಿನಿಮಾದಲ್ಲಿ ನಟಿಸುವಂತೆ ಕರೆದಿದ್ದರು. ಅವರಿಗೂ ಮನಸಿನಾಳದಲ್ಲಿ ನಟನಾಪ್ರೀತಿ ಮೊಳೆಯತೊಡಗಿದ್ದರೂ ಓದಿನ ಮೇಲೆಯೇ ಗಮನ ಕೇಂದ್ರೀಕರಿಸಿದ್ದರು. ನಂತರ ಕಾಲೇಜು ಮುಗಿಸಿ ಕೆಲಸಕ್ಕೂ ಸೇರಿಕೊಂಡರು. ಅಷ್ಟೇ ಅಲ್ಲ, ಹೆಚ್ಚಿನ ಓದಿಗಾಗಿ ವಿದೇಶಕ್ಕೆ ಹೋಗುವ ಸಿದ್ಧತೆಯನ್ನೂ ನಡೆಸಿದ್ದರು. ಆಗಲೇ ನಿರ್ದೇಶಕ ಸೂರಿ ಅವರ ಮನೆಗೆ ಕಾಲಿಟ್ಟಿದ್ದು. ಸಪ್ತಮಿಯ ತಂದೆಯ ಸ್ನೇಹಿತರಾಗಿದ್ದ ಸೂರಿಗೆ ತಮ್ಮ ಸಿನಿಮಾದ ಪಾತ್ರವೊಂದಕ್ಕೆ ಸಪ್ತಮಿ ಚೆನ್ನಾಗಿ ಹೊಂದಿಕೊಳ್ಳುತ್ತಾಳೆ ಅನಿಸಿತ್ತು. ಹೀಗೆ ಪ್ರತಿಭಾವಂತ ನಿರ್ದೇಶಕನ ಜೊತೆಗೆ ಮೊದಲ ಸಿನಿಮಾದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು.

‘ನಾನು ಚಿತ್ರರಂಗವನ್ನು ಪ್ರವೇಶಿಸಿದ್ದೇ ದೊಡ್ಡ ಸಿನಿಮಾದ ಮೂಲಕ. ಸೂರಿ ಅವರಂಥ ನಿರ್ದೇಶಕರು, ಧನಂಜಯ್ ಅವರಂಥ ನಟನ ಜೊತೆಗೆ ನಟಿಸಲು ಸಿಕ್ಕಿದ್ದರಿಂದ ನಾನು ಸಾಕಷ್ಟು ವಿಷಯಗಳನ್ನು ಕಲಿತುಕೊಂಡೆ. ಮೊದಲ ದಿನ ಕ್ಯಾಮೆರಾ ಎದುರಿಸುವಾಗ ತುಸು ಬಳಲಿದ್ದೆ. ಆದರೆ ಸೂರಿ ಸರ್ ನನಗೆ ಕ್ಯಾಮೆರಾದ ತಾಂತ್ರಿಕತೆಯ ಬಗ್ಗೆ ತಿಳಿಸಿಕೊಟ್ಟರು. ನಂತರ ಆರಾಮವಾಗಿ ನಟಿಸಿದೆ’ ಎಂದು ನೆನಪಿಸಿಕೊಳ್ಳುತ್ತಾರೆ ಅವರು.

ಸಪ್ತಮಿ ಅವರ ಮೊದಲ ಸಿನಿಮಾದ ಜೊತೆಜೊತೆಗೇ ಕೊರೊನಾ ಮಾರಿಯೂ ಜಗತ್ತಿನ ಮೇಲೆ ಎರಗಿತು. ಹಾಗಾಗಿ ಚಿತ್ರ, ಥಿಯೇಟರ್‌ಗಳಲ್ಲಿ ಇರುವಾಗಲೇ ಲಾಕ್‌ಡೌನ್ ಘೋಷಣೆಯಾಯಿತು. ‘ನಮ್ಮ ಸಿನಿಮಾ ಇನ್ನೇನು ಒಂದು ತಿಂಗಳು ಪೂರೈಸಬೇಕು ಅನ್ನುವಷ್ಟರಲ್ಲಿ ಲಾಕ್‌ಡೌನ್ ಆಯ್ತು. ಅಷ್ಟರಲ್ಲಿ ಯಾರು ಸಿನಿಮಾ ನೋಡಿದ್ದರೋ ಅವರಲ್ಲಿ ಬಹಳ ಜನ ನಾನು ನಿರ್ವಹಿಸಿದ ಗಿರಿಜಾ ಪಾತ್ರವನ್ನು ಮೆಚ್ಚಿಕೊಂಡರು. ತುಂಬ ಸಹಜವಾಗಿ ನಟಿಸಿದ್ದೀಯಾ ಎಂದು ಬೆನ್ನು ತಟ್ಟಿದರು’ ಎನ್ನುವ ಸಪ್ತಮಿಗೆ ಆ ಯಶಸ್ಸಿನ ನೆರಳಲ್ಲಿಯೇ ಮುಂದುವರಿಯಬಾರದು ಎಂಬ ಎಚ್ಚರವೂ ಮೂಡಿತ್ತು.

‘‘ಲಾಕ್‌ಡೌನ್ ಸಮಯದಲ್ಲಿಯೂ ನನಗೆ ಸಾಕಷ್ಟು ಕಥೆಗಳು ಬರುತ್ತಿದ್ದವು. ಆದರೆ ಅವೆಲ್ಲವೂ ಗಿರಿಜಾ ಪಾತ್ರದ ಛಾಯೆಯನ್ನೇ ಹೊಂದಿದ್ದವು. ನನಗೆ ಆ ಪಾತ್ರದಿಂದ ಹೊರಬರಬೇಕಾಗಿತ್ತು. ನಟಿಯಾಗಿ ನನಗೆ ವೈವಿಧ್ಯ ಬೇಕು, ಬೆಳವಣಿಗೆ ಬೇಕು. ಹಾಗಾಗಿ